**ಸಿಡಬ್ಲೂಃ 3**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.**

**ಸಿ.ಸಿ.ನಂ.566/2020**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಗೋಪಾಲ** | | |
| **ಗಂಡಃತಂದೇಃಹೆಸರು** | **ರಾಮಣ್ಣ** | **ಪಿಡಬ್ಲೂಃ** | 3 |
| **ವಯಸ್ಸು** | 50 | **ಸಿಡಬ್ಲೂಃ** | 3 |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಬೊಮ್ಮೆಕಲ್ಲು ಗ್ರಾಮ** | | |

**ದಿನಾಂಕಃ 10-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ**

ಚಾಸಾ 1 ನನ್ನ ಅಣ್ಣ, ಚಾಸಾ 2 ನನ್ನ ತಮ್ಮ. ಆರೋಪಿತರು ನನಗೆ ಗೊತ್ತು. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಗಲಾಟೆ ನಡೆದಿಲ್ಲ. ಆರೋಪಿತರು ದೊಣ್ಣೆಯಿಂದ ಮತ್ತು ಕೈಗಳಿಂದ ಹೊಡೆದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣಬೆದರಿಕೆಯನ್ನು ಹಾಕಿಲ್ಲ. ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿದರೆ ಗುರುತಿಸಲಾಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ ಸ ಅ ರವರಿಂದಃ-**

ದಿ. 14.05.2020 ರಂದು ಬೆಳಿಗೆ 10.00 ಗಂಟೆ ಸುವಯದಲ್ಲಿ ಬೊಮ್ಮೆಕಲ್ಲು ಗ್ರಾಮದ 2 ನೇ ಆರೋಪಿ ತನ್ನ ಮನೆಯ ಬಳಿ ಇರುವ ಸೈಟ್ ನಲ್ಲಿ ನೀರಿನ ಸಂಪು ಕಟುತ್ತಿದ್ದು ನಾನು ಮತ್ತು

ಪಿಡಬ್ಲೂಃ 3

ಚಾಸಾ 1 ಮತ್ತ 2 ರವರು ಸ್ಥಳಕ್ಕೆ ಹೋಗಿ 2 ಆರೋಪಿಗೆ ಯಾಕೆ ನಮ್ಮ ಸೈಟ್ ನಲ್ಲಿ ಸಂಪು ಹಾಕುತ್ತಿದ್ದೀರಾ ಎಂದು ಕೇಳಿದ್ದಕ್ಕ 1 ರಿಂದ 3 ಆರೋಪಿತರು ಬಂದು ನಮ್ಮ ಮೇಲೆ ಜಗಳ ತೆಗೆದು ನನಗೆ ಚಾಸಾ 1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. 1 ನೇ ಆರೋಪಿ ದೊಣ್ಣಯಿಂದ ಎಡಬಾಗದ ಚಾಸಾ 1 ಬೆನ್ನಿಗೆ ಹೊಡೆದನು ಎಂದರೆ ಸರಿಯಲ್ಲ. 2 ನೇ ಆರೋಪಿ ಕೈಗಳಿಂದ ಚಾಸಾ 1 ರವರ ಮೈ ಕೈ ಮೇಲೆ ಹೊಡೆದು ನೊವುಂಟು ಮಾಡಿದನು ಎಂದರೆ ಸರಿಯಲ್ಲ. 3 ನೇ ಆರೋಪಿ ಚಾಸಾ 1 ರವರಿಗೆ ಪ್ರಾಣ ಬೆದರಿಕೆ ಹಾಕಿದನು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ.

ಸಾಕ್ಷಿಗೆ ಹೇಳಿಕೆಯ ಅಂಶಗಳನ್ನು ಓದಿ ಹೇಳಲಾಗಿ ಸಾಕ್ಷಿಯು ಅಲ್ಲಗಳೆದಿರುವುದರಿಂದ ಸಾಕ್ಷಿಯು ಪೋಲಿಸರಿಗೆ ನೀಡಿದ ಹೇಳಿಕೆಯನ್ನು ನಿ.ಪಿ.4 ಎಂದು ಗುರುತಿಸಲಾಯಿತು.

ನಿಪಿ 4 ರ ಸಂಗತಿಗಳು ಗೊತ್ತಿದ್ದರು ನಾನು ಜಮೀನಿನಲ್ಲಿ ಬಿದ್ದು ಚಿಕಿತ್ಸೆ ಪಡೆದಿದ್ದೆ ಎಂದು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿದ್ದಕೋಸ್ಕರ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ ಶ್ರೀ.ಟಿ.ವಿ.ಎಸ್ ಆರೋಪಿ ಪರ ವಕೀಲರಿಂದಃ- ಇಲ್ಲ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.

ಸಿಡಬ್ಲೂಃ 3